# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org


ಸಂಖ್ಯೆ:SHQ/ORG.1/Organiser Meeting/119/2025-26 - 2366 ದಿನಾಂಕ:03.03.2026

## ಸಭಾ ಸೂಚನಾಪತ್ರ

ವಿಷಯ:- ದಿನಾಂಕ: 2 ರಿಂದ 4 ಏಪ್ರಿಲ್ 2026ರ ವರೆಗೆ ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ ಸಂಘಟಕರ ಸಭೆಯನ್ನು ಆಯೋಜಿಸಿರುವ ಬಗ್ಗೆ.

*****

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯಿಂದ ಮಾನ್ಯ ರಾಜ್ಯ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 2 ರಿಂದ 4 ಏಪ್ರಿಲ್ 2026ರ ವರೆಗೆ ರಾಜ್ಯ ಕೇಂದ್ರ ಕಛೇರಿ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು, ಜಿಲ್ಲಾ ಸಂಘಟಕರು, ಜಿಲ್ಲಾ ಸಂಘಟನಾ ಶಿಕ್ಷಕರು, ಸ್ಕೌಟ್-ಗೈಡ್ ಸ್ವಯಂ ಸೇವಕರು, ಸ್ಕೌಟ್-ಗೈಡ್ ಸಹಾಯಕರ ಸಭೆಯನ್ನು ಏರ್ಪಡಿಸಲಾಗಿದೆ. ಸದರಿ ಸಭೆಗೆ ಮೇಲ್ಕಂಡ ಎಲ್ಲಾ ಸಂಘಟಕರು ತಪ್ಪದೇ ಭಾಗವಹಿಸಲು ತಿಳಿಸಿದೆ.

**ಸಭೆಯಲ್ಲಿ ಚರ್ಚಿಸುವ ಅಂಶಗಳು:**

1. 2025-26ನೇ ಸಾಲಿನ ಗಣತಿ ಸಾಧನೆ ಬಗ್ಗೆ.
2. 2025-26ನೇ ಸಾಲಿನ ಜಿಲ್ಲೆಗಳ ವರದಿ, ತೆಗೆದುಕೊಂಡು ಬರುವ ಬಗ್ಗೆ
3. 2026-27ನೇ ಸಾಲಿನ ಬೇಸಿಗೆ ಶಿಬಿರಗಳನ್ನು ಸಂಘಟಿಸುವ ಬಗ್ಗೆ ಮತ್ತು ಇದುವರೆವಿಗೆ ಬೇಸಿಗೆ ಶಿಬಿರ ಸಂಘಟಿಸಿರುವ ಬಗ್ಗೆ ಮಾಹಿತಿಗಳನ್ನು ತರುವುದು.
4. ರಾಜ್ಯ ಮಟ್ಟದ ವಿಶೇಷ ಬೇಸಿಗೆ ಶಿಬಿರಗಳಿಗೆ ಕಬ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ದಳನಾಯಕರುಗಳನ್ನು ನಿಯೋಜಿಸುವ ಬಗ್ಗೆ
5. ಓ.ವೈ.ಎಂ.ಎಸ್.ನಲ್ಲಿ ನೊಂದಾವಣಿಯ ಬಗ್ಗೆ ಮತ್ತು ಮಕ್ಕಳ ಪ್ರಗತಿಪರ ಶಿಕ್ಷಣದ ಬಗ್ಗೆ ಅಪ್‌ಲೋಡ್ ಮಾಡುವ ಬಗ್ಗೆ.
6. ಶಿಕ್ಷಕರುಗಳಿಗೆ/ಉಪನ್ಯಾಸಕರುಗಳಿಗೆ ಬಿಗಿನರ್ಸ್ ಕೋರ್ಸ್, ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳ ಸಂಘಟನೆ ಬಗ್ಗೆ.
7. ವಿಶ್ವವಿದ್ಯಾನಿಲಯಗಳ ಹಂತದಲ್ಲಿ ಉಪನ್ಯಾಸಕ/ಉಪನ್ಯಾಸಕಿಯರುಗಳಿಗೆ ಮೂಲ ತರಬೇತಿ ಸಂಘಟನೆಗಳ ಬಗ್ಗೆ.
8. ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ/ಉಪನ್ಯಾಸಕಿಯರುಗಳಿಗೆ ಮೂಲ ಮತ್ತು ಮುಂದುವರೆದ ತರಬೇತಿಗಳನ್ನು ವಿಭಾಗೀಯ/ರಾಜ್ಯ ಮಟ್ಟದಲ್ಲಿ ಸಂಘಟಿಸುವ ಬಗ್ಗೆ.
9. ಮೂಲ ತರಬೇತಿ ಹೊಂದಿದ ದಳನಾಯಕರುಗಳಿಗೆ (ಶಿಕ್ಷಕರು) ಚಾರ್ಟರ್ & ವಾರೆಂಟ್ (ಸನ್ನದ್ದು) ಬಾಕಿ ಇದ್ದಲ್ಲಿ ಪಟ್ಟಿಯನ್ನು ತರುವುದು. (ಅರ್ಜಿಯಲ್ಲಿ ಬಿ.ಎಸ್.ಜಿ ಯು.ಐ.ಡಿ. ಕಡ್ಡಾಯವಾಗಿ ನಮೂದಿಸಿರಬೇಕು)
10. 2025-26ನೇ ಸಾಲಿನಲ್ಲಿ ದಳನಾಯಕ/ನಾಯಕಿಯರುಗಳಿಗೆ ದಳ ನವೀಕರಣ ಸ್ಟಿಕ್ಕರ್ಸ್‌ಗಳನ್ನು ನೀಡಿ, ಬಾಕಿ ಉಳಿದ ದಳ ನವೀಕರಣ ಸಿಕ್ಕರ್ಸ್ ಮಾಹಿತಿಗಳ ವಿವರ ತರುವುದು.
11. 2025-26ನೇ ಸಾಲಿನಲ್ಲಿ ಪ್ರಾರಂಭಿಕ ಶಿಬಿರ(ಬಿಗಿನರ್ಸ್ ಕೋರ್ಸ್) ಮತ್ತು ಮೂಲ ತರಬೇತಿ ಶಿಬಿರ ಸಂಘಟಿಸಿರುವ ಜಿಲ್ಲೆಯವರು ಇದುವರೆವಿಗೂ ಪಟ್ಟಿಯನ್ನು ಸಲ್ಲಿಸದೇ ಇರುವ ಜಿಲ್ಲೆಯವರುಗಳು ಪಟ್ಟಿಯನ್ನು ತರುವುದು.
12. ಏಪ್ರಿಲ್/ಮೇ 2026ರ ಮಾಹೆಯಲ್ಲಿ ಎ.ಎಲ್.ಟಿ(ಸ್ಕೌ-ಗೈ) ತರಬೇತಿಯನ್ನು ಆಯೋಜಿಸಿದ್ದು, ಭಾಗವಹಿಸುವವರ ಅರ್ಜಿಗಳನ್ನು ತರುವುದು.

13. ಏಪ್ರಿಲ್/ಮೇ 2026ರ ಮಾಹೆಯಲ್ಲಿ ಹೆಚ್.ಡಬ್ಲ್ಯೂ.ಬಿ(ಸ್ಕೌ-ಗೈ) ತರಬೇತಿಯನ್ನು ಆಯೋಜಿಸಲಿದ್ದು, ಭಾಗವಹಿಸುವವರ ಅರ್ಜಿಗಳನ್ನು ತರುವುದು.

14. ರಾಜ್ಯ ಮಟ್ಟದ ಪ್ರಶಸ್ತಿಗೆ ಮೆಡಲ್ ಆಫ್ ಮೆರಿಟ್ಸ್, ಬಾರ್ ಟು ಮೆಡಲ್ ಆಫ್ ಮೆರಿಟ್ಸ್ ಮತ್ತು ಸೇವಾ ಪದಕ 5, 10,15,20,25 ವರ್ಷ ಮತ್ತು ಹೆಚ್ಚಿನ ವರ್ಷ ಸೇವೆ ಸಲ್ಲಿಸಿದ ಶಿಕ್ಷಕರುಗಳ ಅರ್ಜಿಗಳನ್ನು ಅಥವಾ ಪಟ್ಟಿಯನ್ನು ತರುವುದು

15. 2025-26ನೇ ಸಾಲಿಗೆ ರಾಜ್ಯಪುರಸ್ಕಾರ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್/ಗೈಡ್/ ರೋವರ್/ರೇಂಜರ್ಸ್‌ಗಳು ತೃತೀಯ/ನಿಪುಣ್ ಪರೀಕ್ಷೆಯಲ್ಲಿ ಅರ್ಹರಾದವರು ಮಾತ್ರ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದರ ಬಗ್ಗೆ ಮಾಹಿತಿ ಮತ್ತು ಅನುಸರಿಸಬೇಕಾದ ನಿಮಯರಿತ್ಯ ಕ್ರಮಗಳು.

16. 2025-26ನೇ ಸಾಲಿಗೆ ಸ್ಥಳೀಯ ಹಂತದಿಂದ ಜಿಲ್ಲಾ ಮಟ್ಟದ ವರೆಗಿನ ಪರೀಕ್ಷೆಗಳನ್ನು ಸಂಘಟಿಸುವ ಬಗ್ಗೆ.

17. ಗೋಲ್ಡನ್ ಆ್ಯರೋ ಅವಾರ್ಡ್ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಬಗ್ಗೆ.

18. ವಿವಿಧ ಪಾರಿತೋಷಕ ಸ್ಪರ್ಧೆಗಳಿಗೆ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ

19. 2025-26ನೇ ಸಾಲಿನಲ್ಲಿ ಕಾರ್ಯಕ್ರಮ, ಶಿಬಿರ ಮತ್ತು ತರಬೇತಿಗಳಿಗೆ ರಾಜ್ಯ ಸಂಸ್ಥೆಯಿಂದ ಬಿಡುಗಡೆಯಾದ ಅನುದಾನಕ್ಕೆ ಲೆಕ್ಕಪತ್ರಗಳನ್ನು ಈ ವರೆಗೆ ಸಲ್ಲಿಸದಿರುವವರು ಕೂಡಲೇ ಸಲ್ಲಿಸುವ ಕುರಿತು ಸಲಹೆಗಳು ಮತ್ತು ಕ್ರಮಗಳ ಕುರಿತು

20. ಧ್ವಜಚೀಟಿಯ ಬಾಕಿ ಮೊತ್ತವನ್ನು ತರುವ ಕುರಿತು.

21. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳ ಬಗ್ಗೆ ಚರ್ಚೆ

ಮೇಲೆ ತಿಳಿಸಿರುವ ಅಂಶಗಳ ಬಗ್ಗೆ ತಾವು ಸ್ಪಷ್ಟ ಮಾಹಿತಿಗಳ ಅಂಕಿ-ಅಂಶಗಳ ಸಿದ್ಧತೆ ಮಾಡಿಕೊಂಡು ಸಭೆಗೆ ಹಾಜರಾಗುವುದು. ಭಾಗವಹಿಸುವವರಿಗೆ ಬಂದು ಹೋಗುವ ಸಾಮಾನ್ಯ ಬಸ್ಸಿನ ಅಥವಾ ಎರಡನೇ ದರ್ಜೆಯ ರೈಲ್ವೆ ಟಿಕೇಟಿನ ಪ್ರಯಾಣ ದರವನ್ನು ಮಾತ್ರ ನೀಡಲಾಗುವುದು. ಊಟೋಪಚಾರದ ವ್ಯವಸ್ಥೆಯನ್ನು ರಾಜ್ಯ ಸಂಸ್ಥೆ ವ್ಯವಸ್ಥೆ ಮಾಡಲಾಗಿರುತ್ತದೆ. ತಾವು ದಿನಾಂಕ:02.04.2026ರಂದು ಬೆಳಗ್ಗೆ 9.00 ಗಂಟೆಗೆ ರಾಜ್ಯ ಕೇಂದ್ರ ಕಛೇರಿಯಲ್ಲಿ ರಾಜ್ಯ ಸಂಘಟನಾ ಆಯುಕ್ತರು(ಸ್ಕೌ/ಗೈ) ಇವರಲ್ಲಿ ವರದಿ ಮಾಡಿಕೊಳ್ಳುವುದು ಮತ್ತು ದಿನಾಂಕ:04.04.2026ರಂದು ಸಂಜೆ 6.00 ಗಂಟೆಯ ನಂತರ ಬಿಡುಗಡೆಗೊಳಿಸಲಾಗುವುದು

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

**ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ**

ಗೆ,

ಸಹಾಯಕ ರಾಜ್ಯ ಸಂಘಟನಾ ಆಯುಕ್ತರು/
ಜಿಲ್ಲಾ ಸಂಘಟಕರು/ಜಿಲ್ಲಾ ಸಂಘಟನಾ ಶಿಕ್ಷಕರು
ಸ್ಕೌಟ್-ಗೈಡ್ ಸ್ವಯಂ ಸೇವಕರು/ಸ್ಕೌಟ್-ಗೈಡ್ ಸಹಾಯಕರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
____________________ ಜಿಲ್ಲೆ.

**ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ:**

1. ಜಿಲ್ಲಾ ಕಾರ್ಯದರ್ಶಿ, ಭಾ.ಸ್ಕೌ&ಗೈ, ಕರ್ನಾಟಕ